"ಹೂಂ... ಹೇಳಿ..."

"ಪತಿತೆ... ಶೀಲಗೆಟ್ಟವಳೂಂತ ನೀನು ತಿಳ್ಕೊಳ್ಳೋಕೆ ನೀನು ನೀನಾಗಿಯೇ ವ್ಯಭಿಚಾರ ಮಾಡಲು ಹೋಗಿದ್ದೆಯಾ? ಇಲ್ಲ, ಮದ್ವೆಯಾದ ನಾಟಕ ಮಾಡಿದ, ನಂಬಿದೆ. ಈಗ ಎಷ್ಟು ಜನ ಮರು ಮದುವೆಯಾಗಿಲ್ಲ? ಇನ್ನು ಸಂಬಂಧಕ್ಕೆ ಬಂದರೆ, ಅವನು ನಿನ್ನೊಡನೆ ಲೈಂಗಿಕ ಸಂಪರ್ಕ ಇಟ್ಟುಕೊಂಡ ಮಾತ್ರಕ್ಕೆ ಗಂಡನಾಗಿಬಿಟ್ಟನೆ? ಅವನೇ ಹೇಳಿ ಹೋಗಿಲ್ವಾ? 'ಇದು ಮದ್ವೇನೇ ಅಲ್ಲಾ' ಎಂದು. ಇನ್ನಾವುದರ ಭಯ ನಿನಗೆ?"

"....."

"ನಿನ್ನದೆಲ್ಲವನ್ನೂ ತಿಳಿದಿರುವ, ಪ್ರೀತಿಸುವ, ಗಂಡ, ಮಗು... ನಿನ್ನದಾಗಿರುವಾಗ ನೀನು ವಿನಾಕಾರಣವಾದ ಪಾಪ ಭೀತಿಯಿಂದ ಎಲ್ಲರ ಸಂತೋಷವನ್ನು ಹಾಳು ಮಾಡ್ತಿದ್ದೀಯಾ?..."

"ನಾನೇನ್ಮಾಡ್ಲಿ ಹೇಳಿ ಡಾಕ್ಟ್ರೆ?"

"ಯಾರಿಗೆ ಆಗದಂತಹದೇನೂ ನಿನಗೆ ಆಗಿಲ್ಲ. ಸಂತೃಪ್ತಿಯಿಂದ ಜೀವನ ನಡೆಸಿಕೊಂಡು ಹೋಗು... ನೀನು ಯಾವುದಕ್ಕೂ ಅಂಜಬೇಕಾಗಿಲ್ಲ... ಕೀಳರಿಮೆಪಡಬೇಕಾಗಿಯೂ ಇಲ್ಲ. ತಿಳಿಯಿತಾ? ಮಹಾಭಾರತದಲ್ಲೇ ದ್ರೌಪದಿ ಐದು ಜನರೊಂದಿಗೆ ಇರಲಿಲ್ಲವೇ? ಎಲ್ಲಾ ಕಾಲದಲ್ಲೂ, ಎಲ್ಲವೂ ನಡೆಯತ್ತದೆ... ನಾವು ತೆಗೆದುಕೊಳ್ಳುವ, ಎದುರಿಸುವ ರೀತಿಯಲ್ಲಿದೆ..."

"....."

"ನೀನು ಯಾವ ಪಾಪವನ್ನೂ ಮಾಡಿಲ್ಲ. ಯಾರಿಗೂ ಮೋಸ ಮಾಡಿಲ್ಲ... ನಿನಗೆ ಪ್ರೀತಿಸುವ, ನಿನ್ನನ್ನೇ ನಂಬಿರುವ ಗಂಡ ಮಕ್ಕಳಿದ್ದಾರೆ... ತಿಳಿಯಿತಾ? ಯಾರಿಗೂ ಹೆದರಕೂಡದು..."

"ಹೂಂ..."

"ಎಲ್ಲಾ ಮರೆತು ನಗ್ತಾ ಇರ್ಬೇಕು... ನಿನ್ನ ಗಂಡನೇ ನಿನಗೆ ಸರ್ವಸ್ವ... ಅಲ್ವಾ..."

"ಹೌದು ಡಾಕ್ಟರ್..."

"ಹಾಗೆ ಸ್ವಲ್ಪ ಹೊತ್ತು ನಿದ್ದೆ ಮಾಡು... ದಣಿದಿದ್ದೀಯಾ..."

ಇದುವರೆಗೂ ಮೌನವಾಗಿ ನಿಂತು, ಕೇಳಿಸಿಕೊಳ್ಳುತ್ತಾ ಬರೆಯುತ್ತಿದ್ದ ವಿಜಯಾಳತ್ತ ತಿರುಗಿದ ಪ್ರೊಫೆಸರ್ ರಾವ್, "ಇನ್ನೊಂದರ್ಧ ಗಂಟೆ ಇಲ್ಲೇ ಇರಲಿ... ಅವಳು ಪೂರ್ತಿಯಾಗಿ ಎಚ್ಚರವಾದ ಮೇಲೆ ಕರ್ಕೊಂಡು ಬರಲು ಹೇಳು... ಎಲ್ಲಾ ಬರ್ದುಕೊಂಡೆಯಾ?..." ಎನ್ನುತ್ತಾ ಮೇಲೆದ್ದರು.

"ಹೂಂ..." ಎಂದ ವಿಜಯಾ, ರೂಮಿನ ಬಾಗಿಲು ತೆರೆದಳು. ಕನ್‌ಸಲ್ಟೇಶನ್ ರೂಮಿಗೆ ಹೊರಟ ಪ್ರೊಫೆಸರ್ ಹಿಂದೆ ವಿಜಯಾ ನಡೆದಳು.

ದಿವಾಕರ ಆಕಾಶ ಕಳಚಿ ಬಿದ್ದವನಂತೆ. ಶೂನ್ಯದತ್ತ ನೋಡುತ್ತಾ ಗೋಡೆಗೊರಗಿಕೊಂಡು ನಿಂತಿದ್ದ, ವಿಜಯಾಳನ್ನು ನೋಡುತ್ತಲೇ ಕಾತುರದಿಂದ ಬಂದ. ರಾವ್ ಬಳಿಗೆ ಹೋಗಲು ಕೈಸನ್ನೆಯಿಂದಲೇ ಸೂಚಿಸಿದ ವಿಜಯಾ ತನ್ನ ರೂಮಿಗೆ ಹೋದಳು.

ದಿವಾಕರ್ ಪ್ರೊಫೆಸರ್ ರೂಮಿನೊಳಗೆ ಹೋದ.

"ಕೂತ್ಕೊಳ್ಳಿ ಮಿಸ್ಟರ್ ದಿವಾಕರ್. ಗಾಬರಿಯಾಗ್ಬೇಡಿ ಏನೂ ಆಗಿಲ್ಲ. ಎಲ್ಲಾ ಸರಿಯಾಯಿತು, ಸರಿಯಾಗುತ್ತೆ ಮೊದಲಿಗಿಂತ ಚೆನ್ನಾಗಿರ್ತಾರೆ. ಧೈರ್ಯವಾಗಿರಿ..." ಅವನ ಆತಂಕವನ್ನು ಗಮನಿಸಿ ಹೇಳಿದರು.

"ಅವಳಿಗೆ ಆಗಿದ್ದಾದರೂ ಏನು ಡಾಕ್ಟರ್?"

"ಪಾಪ ಭೀತಿಯಿಂದ ಯಾರಿಗೂ ಹೇಳಲಾರದೆ, ಹೇಳದೆ ಇರಲಾರದೆ ಒಳಗೊಳಗೆ